ಓ.ಎಸ್.ನಂ.202/2024

ಪಿ ಡಬ್ಲ್ಯೂ: 1

ದಿನಾಂಕ 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

ನಾನು ಜೂನ್ 1985 ರಿಂದ ವಕೀಲನಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಆ ಕುರಿತು ದಾಖಲೆಗಳನ್ನು ನಾನು ನೀಡಿರುವುದಿಲ್ಲ. ಪ್ರತಿವಾದಿಗಳ ಪರವಾಗಿ ನಾನು ಒಟ್ಟು 7 ಪ್ರಕರಣಗಳಲ್ಲಿ ಹಾಜರಾಗಿರುತ್ತೇನೆ. ಅವುಗಳಲ್ಲಿ 2 ಸಿವಿಲ್ ದಾವೆಗಳು, 5 ಕ್ರಿಮಿನಲ್ ಪ್ರಕರಣಗಳಲ್ಲಿ ಹಾಜರಾಗಿರುತ್ತೇನೆ. ಸದರಿ ಯಾವುದೇ ಪ್ರಕರಣಗಳು ನಾನು ಹಾಜರಾಗುತ್ತಿದ್ದಾಗ ಮುಗಿದಿರುವುದಿಲ್ಲ. ಪ್ರತಿವಾದಿಗಳು ಮತ್ತು ನನ್ನ ನಡುವೆ ವಕೀಲ ಶುಲ್ಕದ ಕುರಿತು ಯಾವುದೇ ಕರಾರು ಆಗಿರುವುದಿಲ್ಲ. ಪ್ರತಿವಾದಿಗಳು ನಿರ್ದಿಷ್ಟ ಶುಲ್ಕ ಪಾವತಿಸುತ್ತೇವೆ ಎಂದು ಯಾವುದೇ ದಾಖಲೆ ನೀಡಿರುವುದಿಲ್ಲ ಆದರೆ ಮೌಖಿಕವಾಗಿ ತಿಳಿಸಿರುತ್ತಾರೆ.

**2.** ಪ್ರತಿವಾದಿಗಳು ಧರ್ಮಣ್ಣ ಆನ್ವೇರಿ ಮತ್ತು ರುದ್ರಪ್ಪ ಪಟ್ಟಣಶೇಟ್ಟಿ ರವರ ಮೂಲಕ ಪರಿಚಯ ಆಗಿರುತ್ತಾರೆ. ಧರ್ಮಣ್ಣ ಮತ್ತು ರುದ್ರಪ್ಪ ನನ್ನ ಕಕ್ಷಿದಾರರಾಗಿದ್ದರು ಆದರೆ ಈಗ ಆಗಿರುವುದಿಲ್ಲ. ಅವರುಗಳು ನನಗೆ ಮೊದಲಿನಿಂದಲೂ ಪರಿಚಯ ಇರುತ್ತದೆ.

**3.** ಓ.ಎಸ್. ನಂ. 261/2021 ರ ದಾವೆಯು ಶಾಶ್ವತ ನಿರ್ಬಂದಕಾಜ್ಞೆ ದಾವೆ ಆಗಿರುತ್ತದೆ. ಸದರಿ ಪ್ರಕರಣವನ್ನು ಚಂದ್ರಶೇಖರ ನಂದಿಹಳ್ಳಿ ಹೂಡಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ಪ್ರತಿವಾದಿ ಈ ಪ್ರಕರಣದ 1 ನೇ ಪ್ರತಿವಾದಿ ಆಗಿರುತ್ತಾನೆ. ಉಳಿದ ಪ್ರತಿವಾದಿಗಳು ಸದರಿ ದಾವೆಯಲ್ಲಿ ಪಕ್ಷಗಾರಾಗಿರುವ ಕುರಿತು ನನಗೆ ನೆನಪಿಲ್ಲ. ಸದರಿ ಪ್ರತಿವಾದಿಗಳು ಸದರಿ ದಾವೆಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ನೆನಪಿಲ್ಲ. ಓ.ಎಸ್.ನಂ.261/2021 ರ ದಾವೆಯಲ್ಲಿ ನಾನು ಪ್ರತಿವಾದಿಯ ಪರ ಪ್ರತಿವಾದಿ ಪತ್ರ ಮತ್ತು ಅರ್ಜಿಗಳಿಗೆ ತಕರಾರು ನೀಡಿರುವ ಬಗ್ಗೆ ಪ್ರಶ್ನೇ ಕೇಳಿದ್ದು ಸಾಕ್ಷಿಯು ನನಗೆ ಸದರಿ ಪ್ರಕರಣದಲ್ಲಿ ಎನ್.ಓ.ಸಿ ವಕಾಲತ್ ಬಂದಿದ್ದು ಆ ಪೂರ್ವದಲ್ಲಿಯೇ ಪ್ರತಿವಾದ ಪತ್ರ ಮತ್ತು ತಕರಾರು ಸಲ್ಲಿಸಲಾಗಿತ್ತು ಎಂದು ನುಡಿಯುತ್ತಿದ್ದರು. ನಾನು ಹಾಜರಾಗುವ ಪೂರ್ವದಲ್ಲಿ ಬಿ.ಎಚ್.ಕುಮಾರ ವಕೀಲರು ಹಾಜರಾಗಿ ತಕರಾರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ರಮೇಶ ಗೊಣಗೇರಿ ವಕೀಲರು ಹಾಜರಾಗಿದ್ದರು ಎಂದು ನುಡಿಯುತ್ತಾರೆ. ಅವರು ತಕರಾರು ಸಲ್ಲಿಸಿದ್ದ ಬಗ್ಗೆ ನನಗೆ ನೆನಪಿಲ್ಲ.

**4.** ಯಾವ ದಿನಾಂಕದಿಂದ ಯಾವ ದಿನಾಂಕದ ವರೆಗೆ ನಾನು ಸದರಿ ಪ್ರಕರಣದಲ್ಲಿ ಪ್ರತಿವಾದಿ ಪರ ಹಾಜರಾಗಿರುತ್ತೇನೆ ಎಂದು ನೆನಪಿಲ್ಲ. ಸದರಿ ಪ್ರಕರಣದಲ್ಲಿ ಎನ್.ಓ.ಸಿ ವಕಾಲತ್

ನೀಡಲು ಒಟ್ಟು 60,000 ರೂ ಗಳಿಗೆ ಮಾತುಕತೆಯಾಗಿತ್ತು ಎಂದು ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ಶುಲ್ಕ ಪಾವತಿಸಲು ಪ್ರತಿವಾದಿ ಮೌಖಿಕವಾಗಿ ಒಪ್ಪಿರುತ್ತಾರೆ. ಸದರಿ ಪ್ರಕರಣ ಇನ್ನು ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿಯು ನಾನು ಸದರಿ ಪ್ರಕರಣದಿಂದ ನಿವೃತ್ತಿ ಹೊಂದಿರುವುದಾಗಿ ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ 25,000 ರೂ ಶುಲ್ಕ ಪಡೆದಿರುವುದಾಗಿ ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ಶುಲ್ಕವನ್ನು ನಗದು ರೂಪದಲ್ಲಿ ನೀಡಿರುತ್ತಾರೆ. ಆ ಕುರಿತು ನಾನು ಯಾವುದೇ ರಶೀದಿ ನೀಡಿರುವುದಿಲ್ಲ. ಸದರಿ ಪ್ರಕರಣದ ಪ್ರತಿವಾದಿಯು ನಿವೃತ್ತ ನೋಟಿಸ್ ನೀಡುವ ಪೂರ್ವದಲ್ಲಿ ನಾನು ಬಾಕಿ ಶುಲ್ಕ ಕೇಳಿ ನೋಟಿಸನ್ನು ನೀಡಿರುವುದಿಲ್ಲ.

**5.** ಓ.ಎಸ್.ನಂ.154/2022 ಪ್ರಕರಣವು ಪಾಲು ವಾಟ್ನಿ ದಾವೆಯಾಗಿರುತ್ತದೆ. ಸದರಿ ಪ್ರಕರಣದ 2 ನೇ ಪ್ರತಿವಾದಿಯ ಜೋತೆ ಇದ್ದ ಬೇರೆ ವಾದಿಗಳ ಬಗ್ಗೆ ನನಗೆ ನೆನಪಿಲ್ಲ. ಆಕೆಯ ಜೊತೆ ವನಜಾಕ್ಷಿ ಮತ್ತು ಧ್ರಾಕ್ಷಾಯಿಣಿ ಸಹ ವಾದಿಗಳಾಗಿದ್ದರು ಎಂದರೆ ಸರಿ. ಅವರುಗಳನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಯೇ ಶುಲ್ಕ ನೀಡುವ ಜವಾಬ್ದಾರಿ ಹೊತ್ತಿದ್ದ ಕಾರಣ ಹೂಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ ಆದರೆ ಮೌಖಿಕ ಕರಾರು ಆಗಿರುತ್ತದೆ. ಸದರಿ ಪ್ರಕರಣದ ವಾದ ಪತ್ರವನ್ನು ನಾನೇ ತಯಾರಿಸಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಲಯದ ಶುಲ್ಕ 200 ರೂ ಇರುತ್ತದೆ. ನಾನು ಸದರಿ ಪ್ರಕರಣದಲ್ಲಿ ನ್ಯಾಯಾಲಯದ ಶುಲ್ಕ ಎಂದು 35,000 ರೂ ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಇತರೆ ಖರ್ಚುಗಳಿಗಾಗಿ 5,000 ರೂ ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಪ್ರಕರಣದಲ್ಲಿ ಎಷ್ಟು ಶುಲ್ಕ ಪಡೆಯಲಾಗಿದೆ ಎಂಬ ಪ್ರಶ್ನೇಗೆ ಅಂದಾಜು 5000 ನೀಡಿರುವುದಾಗಿ ನುಡಿಯುತ್ತಾರೆ. ಆ ಕುರಿತು ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿರುವುದಿಲ್ಲ.

**6.** ಸದರಿ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆ ಪ್ರಾರಂಭವಾಗುವ ಪೂರ್ವದಲ್ಲಿ ವಾದಿಗಳೇ ನೋಟಿಸ್ ನೀಡಿರುತ್ತಾರೆ ಎಂದರೆ ಸಾಕ್ಷಿಯು ಯಾವ ಹಂತದಲ್ಲಿ ಎಂದು ಗೊತ್ತಿಲ್ಲ ಆದರೆ ಎನ್.ಓ.ಸಿ. ನೀಡಿರುವುದಾಗಿ ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಮೊದಲನೇ ದಿನಾಂಕದಂದು ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಪಡೆಯುವರೆಗೆ ಮಾತ್ರ ಪ್ರಕರಣ ನಡೆಸಿದ್ದು ನಂತರ ನಾನು ಸದರಿ ಪ್ರಕರಣದಲ್ಲಿ ನಾನು ಹಾಜರಾಗಿರುವುದಿಲ್ಲ ಎಂದರೆ ನೆನಪಿಲ್ಲ. ಸದರಿ ಪ್ರಕರಣದಲ್ಲಿ ಎಷ್ಟು ಶುಲ್ಕ ಎಂಬ ಕುರಿತು ಒಪ್ಪಂದವಾಗಿರುವ ಬಗ್ಗೆ ಪ್ರಶ್ನೇ ಕೇಳಿದ್ದು ಸಾಕ್ಷಿಯು ಒಟ್ಟು 7 ಪ್ರಕರಣಗಳಿಗೂ ಸೇರಿ 2,00,000 ರೂಗಳ ಶುಲ್ಕ ನಿಗದಿಗೊಳಿಸಲಾಗಿತ್ತು ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ತಯಾರಿಸಿ ಸಹಿ ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ 2,00,000 ರೂ ಶುಲ್ಕ ನಿಗದಿಗೊಳಿಸಿದ್ದ ಬಗ್ಗೆ ಬರೆಸಿರುವುದಿಲ್ಲ ಎಂದರೆ ಸರಿ.

**7.** ಸಿ.ಸಿ.ನಂ.1393/2022 ರ ಪ್ರಕರಣವನ್ನು ದಿವ್ಯಾ ನಂದಿಹಳ್ಳಿ ಹೂಡಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ಪ್ರಕರಣದಲ್ಲಿ ನಾನು ಆರೋಪಿಯ ಪರವಾಗಿ ಹಾಜರಾರಿ ಜಾಮೀನು ನೀಡಿಸಿರುತ್ತೇನೆ. ಸದರಿ ಪ್ರಕರಣದ ಆರೋಪಿಗಳು ಈ ಪ್ರಕರಣದ 1 ಮತ್ತು 2 ನೇ ಪ್ರತಿವಾದಿಗಳಾಗಿರುತ್ತಾರೆ. ಸದರಿ ಪ್ರಕರಣದಲ್ಲಿ 3 ನೇ ಪ್ರತಿವಾದಿ ಪಕ್ಷಗಾರನಿರಲಿಲ್ಲ ಎಂದರೆ ನೆನಪಿಲ್ಲ. ಸದರಿ ಪ್ರಕರಣದಲ್ಲಿ ಪಿ.ಡಬ್ಲೂ 1 ಮತ್ತು 2 ನೇ ಸಾಕ್ಷಿದಾರರ ಪಾಟೀ ಸವಾಲು ಮಾಡಿರುತ್ತೇನೆ ಎಂದರೆ ಸರಿ. ಅದನ್ನು ಹೊರತು ಪಡಿಸಿ ನಾನು ಬೇರೆ ಯಾವುದೇ ಕೆಲಸ ಮಾಡಿರುವುದಿಲ್ಲ ಎಂದರೆ ಆದೇಶ ಪುಟದಲ್ಲಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಪಿ.ಡಬ್ಲೂ 3 ಮತ್ತು 4 ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೋಟಿಸ ನೀಡಿದ್ದ ಕಾರಣ ಪಾಟೀ ಸವಾಲು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

**8.** ನಿಪಿ-1 ರಿಂದ 5 ರಂತೆ 7 ಪ್ರಕರಣಗಳಿಗೂ ಒಂದೇ ದಿನಾಂಕದಂದು ಪ್ರತಿವಾದಿಗಳು ನೋಟಿಸು ನೀಡಿದ್ದರು ಎಂದರೆ ಸರಿ. ಸದರಿ ಸಿ.ಸಿ.ನಂಬರ್ 1393/2022 ರ ಪ್ರಕರಣದಲ್ಲಿ ಪಿ.ಡಬೂ.3 ಮತ್ತು 4 ನೇ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿರುವುದಿಲ್ಲ ಎಂದು ದಿನಾಂಕಃ 18.10.2023 ರಂದು ಮುಕ್ತಾಯಗೊಳಿಸಲಾಗಿದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿಪಿ-1 ರಿಂದ 5 ನೋಟಿಸಗಳು ನನಗೆ ತಲುಪಿರಲಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ರೂ.50,000 ಶುಲ್ಕ ನಿಗದಿಗೊಳಿಸಲಾಗಿತ್ತು. ಆ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ, ಮೌಖಿಕ ಒಪ್ಪಂದವಾಗಿರುತ್ತದೆ. ಸದರಿ ಪ್ರಕರಣದಲ್ಲಿ ನನ್ನ ಜೂನಿಯರ್ ಗೆ 500 ರೂ ಹೊರತು ಪಡಿಸಿ ಬೇರೆ ಯಾವುದೇ ಶುಲ್ಕ ನೀಡಿರುವುದಿಲ್ಲ. ಶುಲ್ಕ ವಸೂಲಿಗಾಗಿ ಈ ಪ್ರಕರಣಕ್ಕೆ ಕುರಿತಂತೆ ಯಾವುದೇ ನೋಟಿಸು ನೀಡಿರುವುದಿಲ್ಲ.

**9.** ಜೆ.ಸಿ.18/2022 ಪ್ರಕರಣದಲ್ಲಿ ಎಷ್ಟು ಜನ ಆರೋಪಿಗಳು ಇದ್ದರು ಎಂದರೆ ಸಾಕ್ಷಿಯು ಒಬ್ಬನೇ ಇದ್ದು, ಆತನ ಹೆಸರು ಗೊತ್ತಿಲ್ಲ. ಆತನು 1 ಮತ್ತು 2 ನೇ ಪ್ರತಿವಾದಿಗಳ ಮಗ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಜಾಮೀನು ಪಡೆದುಕೊಂಡಿರುವುದು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು 3 ರಿಂದ 4 ಮುದ್ದತ್ತುಗಳಲ್ಲಿ ಹಾಜರಾಗಿರುವುದಾಗಿ ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ದೋಷರೋಪಣೆ ಹೊರೆಸುವ ಪೂರ್ವದಲ್ಲಿಯೇ ನೋಟಿಸು ನೀಡಿದ್ದರು ಎಂದರೆ ನನಗೆ ನೆನಪಿಲ್ಲ. ಸದರಿ ಪ್ರಕರಣದಲ್ಲಿ ಶುಲ್ಕ ಪಾವತಿಯ ಕುರಿತು ಯಾವುದೇ ಕರಾರು ಆಗಿರುವುದಿಲ್ಲ, ಆದರೆ ಮೌಖಿಕ ಮಾತುಕತೆ ಆಗಿರುತ್ತದೆ. ಸದರಿ ಪ್ರಕರಣದ ಒಟ್ಟಾರೆಯಾಗಿ 25,000 ರೂ ಶುಲ್ಕ ಮಾತುಕತೆಯಾಗಿದ್ದು, ನನ್ನ ಒಡಾಟದ ಖರ್ಚು ಬೇರೆ ಇರುತ್ತದೆ. ಸದರಿ ಪ್ರಕರಣದಲ್ಲಿ ಜಾಮೀನನ್ನು ಹಾವೇರಿಯ ಜೆ.ಜೆ.ನ್ಯಾಯಾದಲ್ಲಿ ಜಾಮೀನು ಕೊಡಿಸಿರುತ್ತೇನೆ. ಸದರಿ ಪ್ರಕರಣದ ಕುರಿತು ಜಿಲ್ಲಾ ನ್ಯಾಯಾದಲ್ಲಿ ನೀರೀಕ್ಷಣಾ ಜಾಮಿನು ಸಹ ಕೊಡೆಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣಕ್ಕೆ

ಕುರಿತಂತೆ ನಾನು 25,000 ರೂ ಶುಲ್ಕ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

10. ಜೆ.ಸಿ.ನಂ.17/2022 ಪ್ರಕರಣದಲ್ಲಿಯು ಸಹ ಸದರಿ ಆರೋಪಿಯು ಈ ಪ್ರಕರಣದ ಆರೋಪಿಯಾಗಿರುತ್ತಾನೆ. ಸದರಿ ಪ್ರಕರಣದಲ್ಲಿ ನಾನು ಹಾಜರಾಗಿರುವ ಕುರಿತು ಯಾವುದೇ ದಾಖಲೆಯನ್ನು ಈ ಪ್ರಕರಣದಲ್ಲಿ ಹಾಜರು ಪಡೆಸಿರುವುದಿಲ್ಲ. ದಿನಾಂಕಃ 25.07.2022 ರಿಂದ 04.12.2023 ರವರೆಗೆ ಎಚ್.ಎಸ್.ಬಣಕಾರ ವಕೀಲರು ಹಾಜರಾಗಿದ್ದರು ಎಂದರೆ ಸಾಕ್ಷಿಯು ಆತನು ನನ್ನ ಜ್ಯೂನಿಯರ್ ಆಗಿದ್ದರು ಎಂದು ನುಡಿಯುತ್ತಾರೆ. ಸದರಿ ವಕಾಲತ್ ಗೆ ನನ್ನ ಸಹಿ ಇರುವುವ ಬಗ್ಗೆ ನೆನಪಿಲ್ಲ. ದಿನಾಂಕಃ 22.01.2024 ರಿಂದ ಡಿ.ಟಿ.ಬಿ ವಕೀಲರು ಹಾಜರಾಗಿರುತ್ತಾರೆ ಎಂದರೆ ಸಾಕ್ಷಿಯು ನೋಟಿಸ ನೀಡಿದ ನಂತರ ಹಾಜರಾಗಿರಬಹುದು ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಹಾಜರಾಗದೇ ಇದ್ದರು ಸಹ ನಾನು ಸುಳ್ಳು ಕ್ಲೇಂ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

11. ಪ್ರತಿವಾದಿಗಳು ಈ ಮೇಲಿನ ಪ್ರಕರಣದಲ್ಲಿ ಎನ್.ಒ.ಸಿ ಕೇಳಿದಾಗ ನಾನು ಎನ್.ಒ.ಸಿ ವಕಾಲತ್ ಮತ್ತು ಪ್ರಕರಣದ ಪೈಲ್ ಗಳನ್ನು ಹಿಂತಿರುಗಿಸಿರುವ ಬಗ್ಗೆ ಪ್ರಶ್ನೇ ಕೇಳಿದ್ದು ಸಾಕ್ಷಿಯು ಪಂಚರನ್ನು ಕರೆತಂದು ತೆಗದುಕೊಂಡು ಹೊಗುವಂತೆ ಹೇಳಿಧ್ದು, ದರ್ಮಣ್ಣ ಮತ್ತು ರುದ್ರಪ್ಪ ಬಂದು 50 ಸಾವಿರ ನೀಡಿ ಎಲ್ಲಾ ಪ್ರಕರಣಗಳ ಎನ್.ಒ.ಸಿ ನೀಡುವಂತೆ ಕೇಳಧ್ದು ನಾನು ಒಪ್ಪಿಕೊಂಡಿರುತ್ತೇನೆ. ಸದರಿ ಪ್ರಕರಣದ ಎಲ್ಲಾ ಪೈಲ್ಗಳು ನನ್ನ ಬಳಿ ಇನ್ನು ಇವೆ ಎಂದರೆ ಸಾಕ್ಷಿಯು ಶುಲ್ಕ ನೀಡದ ಕಾರಣ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಕಾರಣ ಪ್ರತಿವಾದಿಗಳಿಗೆ ಪ್ರಕರಣ ನಡೆಸಲು ಅನಾನುಕೂಲವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.